

ಉತ್ಸಾಹೀ ಬರಹಗಾರ ವಿಕ್ರಮ ವಿಸಾಜಿ ಬೀದರ ಜಿಲ್ಲೆಯ ಭಾಲ್ಕಿಯವರು. ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕರು. ಕಥೆ, ಕವನ ಮತ್ತು ಅನುವಾದ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿ ಮಾಡಿದವರು. ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

20ನೇ ಶತಮಾನದ ಆರಂಭದಲ್ಲಿ ಮಹಾದೇವಿ ವರ್ಮಾ ಮತ್ತು ಸುಭದ್ರಾಕುಮಾರಿ ಚವ್ಹಾಣ್ ಇವರಿಬ್ಬರನ್ನೂ ಬಿಟ್ಟರೆ ಹಿಂದಿ ಸಾಹಿತ್ಯದಲ್ಲಿ ಹೆಚ್ಚಿನ ಹೆಣ್ಣುಮಕ್ಕಳು ಸಿಗುವುದಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಆದರೆ ವಿಮರ್ಶೆ ಬದಲಾಗಿದೆ ಎಂದು ಅನಿಸುತ್ತಿಲ್ಲ. ಆಮೇಲೆ ನಾವು ಯಾವುದನ್ನು ಶ್ರೇಷ್ಠ ಸಾಹಿತ್ಯವೆಂದು ಗುರುತಿಸತೊಡಗಿದೆವು ಆ ಮಾನದಂಡಗಳಲ್ಲಿಯೇ ಸಮಸ್ಯೆಯಿತ್ತು. ಅವು ಮಹಿಳಾ ಸಾಹಿತ್ಯವನ್ನು ಒಳಗೊಳ್ಳದಾದವು. ಅವುಗಳ ಪ್ರಕಾರ ಮಹಿಳಾ ಸಾಹಿತ್ಯ ಬಹಳ ದುರ್ಬಲ ಎನಿಸಿತು. ಇಲ್ಲಿ ನಾವು ಇನ್ನೊಂದು ಎಚ್ಚರವನ್ನೂ ಇಟ್ಟುಕೊಳ್ಳಬೇಕಾಗಿದೆ. ಕೇವಲ ಪುರುಷರು ಬರೆದಿದ್ದಾರೆಂದ ಮಾತ್ರಕ್ಕೆ ಎಲ್ಲಾ ವಿಮರ್ಶೆಯನ್ನೂ ತಿರಸ್ಕರಿಸಬೇಕಾಗಿಲ್ಲ. ಅವರು ಪುರುಷರಾಗಿದ್ದೂ ಸತ್ಯವನ್ನು, ಸರಿಯಾದದ್ದನ್ನೂ ಹೇಳುತ್ತಿದ್ದಾರೆಯೇ ಎನ್ನುವುದನ್ನು ಕೂಡ ಗಮನಿಸಬೇಕಾಗಿದೆ. ಹಜಾರಿಪ್ರಸಾದ್ ದ್ವಿವೇದಿಯಿಂದ ಹಿಡಿದು ನಾಮವರ್ ಸಿಂಗ್ ಅವರವರೆಗೆ ಅನೇಕರು ಮಹತ್ವದ್ದನ್ನೂ ಬರೆದಿದ್ದಾರೆ. ದೂದ್‌ನಾಥರು ಮಹಾದೇವಿ ವರ್ಮಾರ ಬಗ್ಗೆ ಮುಖ್ಯವಾದ ಕೃತಿ ರಚಿಸಿದ್ದಾರೆ. ಇದೆಲ್ಲ ತುಂಬಾ ಸಂಕೀರ್ಣವಾದ ಸಂಗತಿ. ಮಹಿಳೆ ಹೇಳುತ್ತಿರುವುದೆಲ್ಲವೂ ಸರಿಯಾದದ್ದೇ ಆಗಿರುತ್ತದೆಂದೂ ಭಾವಿಸಬೇಕಾಗಿಲ್ಲ, ಹಾಗೆಯೇ ದಲಿತ ಲೇಖಕರು ಹೇಳುತ್ತಿರುವುದೆಲ್ಲ ಸೂಕ್ಷ್ಮವಾದದ್ದೇ ಎಂದೂ ತಿಳಿಯಬೇಕಾಗಿಲ್ಲ. ಹಾಗೆ ಮಾಡಿದರೆ ಸಂಗತಿಗಳನ್ನು ಸರಳೀಕರಿಸಿದಂತಾಗುತ್ತದೆ. ನಾವು ಸಾಹಿತ್ಯ ವಿಮರ್ಶೆಯ ಚರಮ ಸ್ಥಿತಿಯಲ್ಲಿ ಇಂಥ ಸರಳೀಕರಣಗಳನ್ನೆಲ್ಲ ದಾಟಿ ಸಾಹಿತ್ಯದ ಬೆಲೆಕಟ್ಟಬೇಕಾಗುತ್ತದೆ. ಇನ್ನೊಂದು ಸಮಸ್ಯೆ ಏನೆಂದರೆ ನಮಗೆ ಬೇಗ ಖ್ಯಾತಿ ಬೇಕು. ಏನಾದರೂ ಬರೆದು ಬೇಗ ಹೆಸರು ಗಳಿಸಿಕೊಳ್ಳಬೇಕು. ಕೃತಿಗಳು ಅರ್ಥವಾದವೊ ಬಿಟ್ಟವೊ ಬೇಗ ನಿರ್ಣಯ ಕೊಡಬೇಕು. ಈ ಆತುರ ಹಿಂದಿ ವಿಮರ್ಶೆಯಲ್ಲೂ ಇದೆ. ಸಾಹಿತ್ಯವೂ ಒಂದು ಸಾಧನೆ. ಹಿಂದೆಲ್ಲ ವಿಮರ್ಶೆಯೂ ಒಂದು ತಪಸ್ಸಾಗಿತ್ತು. ಕೆಲ ಕೃತಿಗಳನ್ನು ಅರ್ಥಮಾಡಿಕೊಳ್ಳಲು ಜೀವನವನ್ನೇ ಸವೆಸಿಬಿಡುತ್ತಿದ್ದರು. ಒಂದಿಬ್ಬರು ಲೇಖಕರನ್ನು ಅರ್ಥಮಾಡಿಕೊಳ್ಳುವಲ್ಲಿ ಅವರ ಆಯುಷ್ಯವೇ ಕರಗಿಹೋಗುತ್ತಿತ್ತು. ಅದೊಂದು ದೀರ್ಘ ಪಯಣವಾಗಿತ್ತು. ಈಗ ವಿಮರ್ಶೆಯಲ್ಲಿ ಪಯಣ ಮೊಟಕುಗೊಂಡಿದೆ. ಗುರಿ ಮಾತ್ರ ಉಳಿದುಕೊಂಡಿದೆ. ಈಗ ಬರೆಯುತ್ತೇವೆ ಮರುದಿನ ಫೇಸ್‌ಬುಕ್‌ನಲ್ಲಿ ಹಾಕಿಬಿಡುತ್ತೇವೆ. ಅದಕ್ಕೆ ಬರುವ ಕಾಮೆಂಟ್‌ಗಳನ್ನು ಲೆಕ್ಕಹಾಕುತ್ತ ಕೂಡುತ್ತೇವೆ. ಪ್ರತಿಯೊಂದಕ್ಕೂ ಪ್ರಚಾರ ಬೇಕು. ಪ್ರಚಾರಕ್ಕಾಗಿಯೇ ಕೆಲ ಏಜೆಂಟರನ್ನೂ ಇಟ್ಟುಕೊಂಡಿದ್ದೇವೆ. ಇದು ಕೇವಲ ಸಾಹಿತ್ಯ ವಿಮರ್ಶೆಯ ಸಮಸ್ಯೆ ಮಾತ್ರವಲ್ಲ. ಈ ಕಾಲದ ಸಮಸ್ಯೆಯೆಂದೇ ತೋರುತ್ತದೆ. ಸಾಹಿತ್ಯ, ರಾಜಕಾರಣ, ಮಾಧ್ಯಮ, ವ್ಯಾಪಾರ ಎಲ್ಲೆಡೆಯೂ ಈ ರೋಗ ಹಬ್ಬುತ್ತಿದೆ. ನೋಡಿ ಕೆಲವೊಂದು ಕಾಲದಲ್ಲಿ ಅನೇಕ ಕ್ಷೇತ್ರಗಳಲ್ಲಿ ಬಹಳ ದೊಡ್ಡ ವ್ಯಕ್ತಿಗಳು ಏಕಕಾಲಕ್ಕೆ ಕಂಡುಬರುತ್ತಿದ್ದರು. ಮತ್ತೆ ಕೆಲ ಕಾಲದಲ್ಲಿ ಬಹಳ ದುರ್ಬಲ ವ್ಯಕ್ತಿತ್ವಗಳೇ ಮುಂಚೂಣಿಯಲ್ಲಿರುತ್ತವೆ. ನಮ್ಮ ಕಾಲ ಇಂಥ ಅಸಹಾಯಕತೆಗೆ ಸಾಕ್ಷಿಯಾಗಿದೆಯೇನೊ. ಇದು ಹಿಂದಿ ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯದ ದೃಷ್ಟಿಯಿಂದಲೂ ಅತ್ಯಂತ ದುಃಖಕರವಾದ ಸಂಗತಿ.

ಹಿಂದಿ ಸಾಹಿತ್ಯ ವಿಮರ್ಶೆಯ ಇನ್ನೊಂದು ರೋಗವೆಂದರೆ ಸ್ಟಾರ್‌ಡಮ್‌ಗಳ ನಿರ್ಮಾಣ. ಅಂದರೆ ಕೆಲ ಮುಖ್ಯ ಸ್ಟಾರ್ ಲೇಖಕರನ್ನು ಗುರುತಿಸುವುದು ಹಾಗು ವಿಮರ್ಶೆಯನ್ನು ಅವರ ಸುತ್ತಲೇ ಸುತ್ತಿಸುವುದು. ಸಾಹಿತ್ಯದ ವಾತಾವರಣ, ಸಾಹಿತ್ಯದ ಪರಿವರ್ತನೆಯ ಬಿಂದುಗಳು, ಸೃಜನಶೀಲತೆಯ ಸ್ವರೂಪ, ಸಾಹಿತ್ಯದ ಅದೃಶ್ಯ ಧ್ವನಿಗಳು ಇವುಗಳ ಬಗ್ಗೆ ನಿರಾಸಕ್ತರಾಗಿದ್ದೇವೆ.